# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

**ಎಸ್.ಸಿ. 110/2017**

| | | | |
|---|---|---|---|
| **ಸಾಕ್ಷಿದಾರರ ಹೆಸರು** | ಃ ಶ್ರೀ ಮುತ್ತುರಾಯ | | *ಪ್ರಮಾಣ ಮಾಡಿಸಿದ ದಿನಾಂಕಃ* |
| **ತಂದೆ/ಗಂಡನ ಹೆಸರು** | ಃ ಶ್ರೀ ಲೇ.ಮುತ್ತಯ್ಯ | | **09.01.2023** |
| **ವಯಸ್ಸು** | ಃ **60 ವರ್ಷ** | | |
| **ವೃತ್ತಿ** | ಃ ವ್ಯವಸಾಯ | **ಪ್ರಾ.ಸಾ.** | ಃ **25** |
| **ವಾಸಸ್ಥಳ** | ಃ ಮಳವಳ್ಳಿ ಟೌನ್ | **ಚಾ.ಸಾ.** | ಃ **26** |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ಮಳವಳ್ಳಿ – ಮಾಗನೂರು ರಸ್ತೆಯಲ್ಲಿ ನನಗೆ ಸೇರಿದ ಜಮೀನು ಇದೆ. ಸದರಿ ಜಮೀನಿನಲ್ಲಿ ವೀಳ್ಯದ ಎಲೆಯನ್ನು ಬೆಳೆದಿದ್ದೇನೆ. ನನ್ನ ಜಮೀನಿನಿಂದ ವಾಸದ ಮನೆ *2* ಕಿ.ಮೀ ದೂರ ಇದೆ. ನಮ್ಮ ಜಮೀನಿಗೆ ಹೊಂದಿಕೊಂಡಂತೆ ನನ್ನ ಅಣ್ಣ ತಮ್ಮಂದಿರ ಜಮೀನು ಮತ್ತು ನನ್ನ ಜಮೀನು ಎದುರಿಗೆ ಮಾರ್ಕಂಡೇಯ ಅವರಿಗೆ ಸೇರಿದ ಜಮೀನು ಇದೆ. ನನಗೆ ಈಗ ತೋರಿಸಿದ ಪೊಟೋನಲ್ಲಿ ಕಂಡುಬರುವ ಕಾರು ನಾನು ಜಮೀನು ಬಳಿ ನೋಡಿಲ್ಲ. ಸದರಿ ಕಾರಿನ ಬಗ್ಗೆ ನಾನು ಪೋಲೀಸರಿಗೆ ಮಾಹಿತಿ ಮತ್ತು ಹೇಳಿಕೆ ಕೊಟ್ಟಿಲ್ಲ.

***ಈ ಹಂತದಲ್ಲಿ, ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದಾರೆ. ಸಾಕ್ಷಿಯ ಹೇಳಿಕೆಯನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.***

***ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-***

*2.* ಪೋಲೀಸರು ನಮ್ಮ ಜಮೀನು ಬಳಿ ಬೀಟ್ ಕರ್ತವ್ಯದ ಮೇಲೆ ಬಂದು ಹೋಗುತ್ತಿದ್ದರು ಎಂದರೆ ಸರಿ. ನನಗೆ ತೋರಿಸಿದ ಪೊಟೋದಲ್ಲಿ ಕಂಡುಬರುವ ಕಾರನ್ನು ನಾನು ನೋಡಿದ್ದೇನೆ ಎಂದರೆ

ಸರಿಯಲ್ಲ. ಪ್ರತಿನಿತ್ಯ ಸಾಮಾನ್ಯವಾಗಿ ನಾನು ಊಟಕ್ಕೆ ಮನೆಗೆ ಹೋಗಿ ಬರುತ್ತಿದ್ದೆ. ದಿಃ*23.12.2016* ರಂದು ನಾನು ಎಂದಿನಂತೆ ಊಟಕ್ಕೆ ಮನೆಗೆ ಹೋಗಿ ಬಂದಿದ್ದು ಸಂಜೆ *5.00* ಗಂಟೆಗೆ ಜಮೀನು ಬಳಿ ನಂಬರ್ ಪ್ಲೇಟ್ ಇಲ್ಲದ ಸ್ಟಿಲರ್ ಬಣ್ಣದ ಸ್ಯಾಂಟ್ರೋ ಕಾರ್ ನಿಂತಿದ್ದು ಅದರ ಮುಂಭಾಗ ಬಲ ಭಾಗದ ಚಕ್ರ ಪಂಚರ್ ಆಗಿದ್ದು ಮುಂಭಾಗದಲ್ಲಿ ಜಖಂ ಆಗಿತ್ತು ಮತ್ತು ನಾನು ನೋಡಿದ್ದೇನೆ ಎಂದರೆ ಸರಿಯಲ್ಲ. ಮರುದಿನ ಸದರಿ ಕಾರು ಜಮೀನಿನಲ್ಲಿ ಇದ್ದ ಕಾರಣ ನಾನು ಪೊಲೀಸರಿಗೆ ಮಾಹಿತಿ ಕೊಟ್ಟ ಮೇರೆಗೆ ಪೊಲೀಸರು ಸದರಿ ಕಾರನ್ನು ತೆಗೆದುಕೊಂಡು ಹೋಗಿದ್ದಾರೆ ಎಂದು ಗೊತ್ತಿಲ್ಲ. ನ್ಯಾಯಾಲಯದಲ್ಲಿ ಹಾಜರು ಇರುವ ಆರೋಪಿಗಳನ್ನು ನೋಡಿಲ್ಲ. ದಿಃ *27.12.2016* ರಂದು *1* ರಿಂದ *5* ನೇ ಆರೋಪಿಗಳನ್ನು ಪೋಲೀಸರು ಜಮೀನು ಬಳಿ ಕರೆದುಕೊಂಡು ಬಂದಿದ್ದರು ಮತ್ತು ಸದರಿ ಆರೋಪಿಗಳು ಕಾರನ್ನು ನಿಲ್ಲಿಸಿ ಹೋಗಿದ್ದ ಬಗ್ಗೆ ನನ್ನ ಸಮಕ್ಷಮ ಒಪ್ಪಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಾಹಿತಿಯ ಬಗ್ಗೆ ನನಗೆ ಈಗ ಓದಿ ಹೇಳಿದಂತೆ ನಿ.ಪಿ–*105* ರಂತೆ ತನಿಖಾಧಿಕಾರಿ ಸಮಕ್ಷಮ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗಳು ಪರಿಚಯ ಇದ್ದಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ- ಇಲ್ಲ

.

ಮರು ವಿಚಾರಣೆಃ- ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ ಎ ಒ.,

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು